www.ecourtsindia.com

## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.

**ಸಿ.ಸಿ.ಸಂಖ್ಯೆಃ 1538/2023**

| | |
|---|---|
| **ಪಿರ್ಯಾದಿ** | ಶ್ರೀ ಹೆಚ್. ಎಸ್. ಮಂಜುನಾಥ<br>ಬಿನ್ ಹೆಚ್. ಬಿ. ಶಿವಯ್ಯ,<br>ವಯಸ್ಸು 32 ವರ್ಷ,<br>ವ್ಯವಸಾಯ ಮತ್ತು ಟ್ರಾವೆಲ್ಸ್ ವ್ಯವಹಾರ,<br>ವಾಸಃ ಶಾಂತಿನಗರ,<br>2 ನೇ ತಿರುವು, ಶಂಕರಘಟ್ಟ,<br>ಭದ್ರಾವತಿ. |
| | **ವಿರುದ್ಧ** |
| **ಆರೋಪಿತರು** | ಶ್ರೀ ಮೊಹಮ್ಮದ್ ಇಬ್ರಾಹಿಂ<br>ಬಿನ್ ಶೇಕ್ ಅಬ್ದುಲ್ ಕುದ್ದೂಸ್ ಸಾಬ್,<br>ವಯಸ್ಸು 55 ವರ್ಷ,<br>ಫಾರೆಸ್ಟ್ ಎ.ಎಸ್.ಎಫ್ ಆಫೀಸ್ನಲ್ಲಿ ಅಟೆಂಡರ್,<br>ಭದ್ರಾ ವನ್ಯಜೀವಿ ಉಪ-ವಿಭಾಗ,<br>ಲಕ್ಕವಳ್ಳಿ ಪೋಸ್ಟ್,<br>ಚಿಕ್ಕಮಗಳೂರು ಜಿಲ್ಲೆ. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ-1: ನೀವು ಪಿರ್ಯಾದುದಾರರ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ-2: ಪ್ರಾಸಾ-1 ಶ್ರೀ ಹೆಚ್. ಎಸ್. ಮಂಜುನಾಥ ಇವರು ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಅವರಿಂದ ನೀವು ರೂ.7,50,000/- (ಏಳು ಲಕ್ಷದ ಐವತ್ತು ಸಾವಿರ ರೂಪಾಯಿ) ಗಳನ್ನು ನಿಮ್ಮ ಗೃಹಕೃತ್ಯದ ಸಲುವಾಗಿ ದಿನಾಂಕ 29/04/2022 ರಂದು ಸಾಲವಾಗಿ ಪಡೆದುಕೊಂಡಿದ್ದು,

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-5.pdf

ಸದರಿ ಹಣದ ಮರುಪಾವತಿಗಾಗಿ, ದಿನಾಂಕ 14/07/2023 ರ ರೂ.7,50,000/- ಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಆರ್.ಪಿ ಶಾಖೆಯ ಚೆಕ್ ನಂ.652440 ಅನ್ನು ನೀಡಿರುತ್ತೀರಿ ಎಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ-

ಪ್ರಶ್ನೆ-3: ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ಕನ್ನು ತಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಆರ್.ಪಿ ಶಾಖೆ, ಭದ್ರಾವತಿಯಲ್ಲಿ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಚೆಕ್ ದಿನಾಂಕ 19/07/2023 ಹಾಗೂ 19/09/2023 ರಂದು 'Funds Insufficient" ಎಂಬ ಷರಾದೊಂದಿಗೆ ವಾಪಾಸ್ಸಾಗಿರುತ್ತದೆ ಎಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ-

ಪ್ರಶ್ನೆ-4: ಸದರಿ ಸಾಕ್ಷಿಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ಕಾನೂನು ಬದ್ಧವಾಗಿ ಕೊಡಬೇಕಾದ ಹಣವನ್ನು ಕೊಡದೇ ಮೋಸ ಮಾಡಬೇಕೆಂಬ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಹಣವಿಲ್ಲದಿದ್ದರೂ ಬೋಗಸ್ ಚೆಕ್ಕು ಕೊಟ್ಟು ಅವರಿಗೆ ಮೋಸ ಮಾಡಿರುತ್ತೀರಿ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನಾದರೂ ಹೇಳುವುದು ಇದೆಯೇ?

ಉತ್ತರಃ-

ಪ್ರಶ್ನೆ-5: ಸದರಿ ಸಾಕ್ಷಿಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ವಕೀಲರ ಮೂಲಕ ನಿಮಗೆ ಚೆಕ್ಕು ನಗದಾಗದೇ ವಾಪಾಸ್ಸು ಬಂದ ಬಗ್ಗೆ ಹಾಗೂ ಹಣವನ್ನು ಮರುಪಾವತಿಸಲು ಹೇಳಿ ದಿನಾಂಕ 16/10/2023 ರಂದು ತಿಳುವಳಿಕೆ ನೀಡಿದ್ದು, ಅದು ನಿಮಗೆ ಜಾರಿಯಾಗಿದ್ದರೂ ಸಹ ಇದುವರೆಗೂ ನೀವು ಹಣವನ್ನು ಪಾವತಿ ಮಾಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ನಿವೇನಾದರೂ ಹೇಳುವುದು ಇದೆಯೇ?

ಉತ್ತರಃ-

ಪ್ರಶ್ನೆ-6: ಇನ್ನೇನಾದರು ಹೆಚ್ಚಿಗೆ ಹೇಳುವುದು ಇದೆಯೇ?

ಉತ್ತರಃ-

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-5.pdf

www.ecourtsindia.com

ಪ್ರಶ್ನೆ-7: ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯಗಳಿವೆಯೇ?

ಉತ್ತರಃ-

(ಆರೋಪಿಯ ಹೇಳಿಕೆಯನ್ನು ದಿನಾಂಕ 10/02/2025 ರಂದು ತೆರೆದ ನ್ಯಾಯಾಲಯದಲ್ಲಿ ಮೇಲ್ಕಂಡಂತೆ ದಾಖಲುಮಾಡಿಕೊಳ್ಳಲಾಗಿದೆ.)

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಭದ್ರಾವತಿ.

ಆರೋಪಿಯ ಸಹಿ

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-5.pdf